**ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು -01**

**ಸಂಖ್ಯೆ:** ಯೋ 4/ ಎಸ್.ಸಿ.ಪಿ/ ಟಿ.ಎಸ್.ಪಿ/ ಎಸ್.ಎ.ಎಲ್.ಸಿ.1/2016-17 **ದಿನಾಂಕ:** 5-10-2016

**ಜ್ಞಾಪನ**

**ವಿಷಯ:** ಸರ್ಕಾರಿ ಪ್ರೌಢಶಾಲೆಗಳಲ್ಲಿ 9 ಮತ್ತು 10ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಕಲಿಕೆಯಲ್ಲಿ ಹಿಂದುಳಿದ ಇತರೆ ವರ್ಗದ ವಿದ್ಯಾರ್ಥಿಗಳಿಗೆ ದಸರಾ ರಜೆ ಅವಧಿಯಲ್ಲಿ ವಿಶೇಷ ಬೋಧನಾ ತರಬೇತಿಯನ್ನು ಏರ್ಪಡಿಸುವ ಕುರಿತು

**ಉಲ್ಲೇಖ:** ಈ ಕಛೇರಿ ಪತ್ರ ಸಮಸಂಖ್ಯೆ ದಿನಾಂಕ 26-09-2016 ಮತ್ತು 4.10.2016

2016-17 ನೇ ಸಾಲಿನ ದಸರಾ ರಜೆ ಅವಧಿಯಲ್ಲಿ ಉಲ್ಲೇಖದ ಅನ್ವಯ ದಿನಾಂಕ 8-10-2016 ರಿಂದ 23-10-2016 ರವರೆಗೆ 12 ದಿನಗಳು (10-10-2016, 11-10-2016, 12-10-2016 ಮತ್ತು 15-10-2016 ರಜೆ ಹೊರತುಪಡಿಸಿ) ಆಯ್ದ ಜಿಲ್ಲೆ/ ಬ್ಲಾಕ್‌ಗಳಲ್ಲಿನ ಸರ್ಕಾರಿ ಪ್ರೌಢಶಾಲೆಗಳಲ್ಲಿ 9 ತ್ತು 10ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಕಲಿಕೆಯಲ್ಲಿ ಹಿಂದುಳಿದ ಇತರೆ ವರ್ಗದ ವಿದ್ಯಾರ್ಥಿಗಳಿಗೆ ದಸರಾ ರಜೆ ಅವಧಿಯಲ್ಲಿ **'ವಿಶೇಷ ಬೋಧನಾ ತರಬೇತಿಯನ್ನು'** ಏರ್ಪಡಿಸಿರುವುದು ಸರಿಯಷ್ಟೆ.

ಇದಕ್ಕೆ ಸಂಬಂಧಿಸಿದಂತೆ, ದಿನಾಂಕ 5-10-2016 ರಂದು ಬೆಳಿಗ್ಗೆ 10.00 ರಿಂದ ಪದವಿ ಪೂರ್ವ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ಬಯೋಮೆಟ್ರಿಕ್/ ಫಿಂಗರ್ ಪ್ರಿಂಟ್ ಸ್ಕ್ಯಾನರ್ ತಂತ್ರಾಂಶ ಅಳವಡಿಕೆ ಮೂಲಕ ವಿದ್ಯಾರ್ಥಿಗಳ ಹಾಜರಾತಿಯನ್ನು ಖಾತರಿಪಡಿಸಿಕೊಳ್ಳುವ ಸಲುವಾಗಿ ಆಯ್ದ ಜಿಲ್ಲೆಗಳ ಕಂಪ್ಯೂಟರ್ ಪ್ರೋಗ್ರಾಮರ್ಸ್‌ಗಳಿಗೆ ತರಬೇತಿಯನ್ನು ಆಯೋಜಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಸಂಬಂಧಿಸಿದಂತೆ, ತರಬೇತಿ ಪಡೆದ ಜಿಲ್ಲಾ ಕಂಪ್ಯೂಟರ್ ಪ್ರೋಗ್ರಾಮರ್ಸ್‌ಗಳು **ಬ್ಲಾಕ್ ಹಂತದ ಕಂಪ್ಯೂಟರ್ ಪ್ರೋಗ್ರಾಮರ್ಸ್‌ಗಳು/ ಡೇಟಾ ಎಂಟ್ರಿ ಆಪರೇಟರ್ಸ್‌ಗಳಿಗೆ ದಿನಾಂಕ 7-10-2016 ರಂದು ಜಿಲ್ಲಾ ಹಂತದಲ್ಲಿ ತರಬೇತಿಯನ್ನು ಆಯೋಜಿಸಿ,** ಸಂಬಂಧಿಸಿದ ಬಯೋಮೆಟ್ರಿಕ್/ ಫಿಂಗರ್ ಪ್ರಿಂಟ್ ಸ್ಕ್ಯಾನರ್ ತಂತ್ರಾಂಶ ಅಳವಡಿಕೆ ಸಾಧನವನ್ನು ವಿತರಿಸಿ, ಅಗತ್ಯ ಮಾರ್ಗದರ್ಶನವನ್ನು ನೀಡುವುದು ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆಯ ವತಿಯಿಂದ ಪಿ.ಯು. ವಿದ್ಯಾರ್ಥಿಗಳಿಗೆ ಹಮ್ಮಿಕೊಳ್ಳಲಾಗಿರುವ ಇದೇ ರೀತಿಯ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವಲ್ಲಿ, ಮಾನ್ಯ ಆಯುಕ್ತರ ಆದೇಶದಂತೆ, ಜಿಲ್ಲಾ ಕಂಪ್ಯೂಟರ್ಸ್ ಮತ್ತು ಬ್ಲಾಕ್ ಕಂಪ್ಯೂಟರ್ ಆಫರೇಟರ್ಸ್ / ಡೇಟಾ ಎಂಟ್ರಿ ಆಫರೇಟರ್ಸ್‌ಗಳು ಪಿ.ಯು. ಇಲಾಖೆಗೆ ಅಗತ್ಯ ತಾಂತ್ರಿಕ ನೆರವು ನೀಡಲು ತಿಳಿಸಿದೆ.

ಇದಕ್ಕೆ ಸಂಬಂಧಿಸಿದಂತೆ ವೈಯಕ್ತಿಕ ಗಮನವನ್ನು ಹರಿಸಿ, ಕ್ರಿಯಾಯೋಜನೆಯನ್ವಯ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲು ಈ ಮೂಲಕ ತಿಳಿಸಿದೆ.

**ಪ್ರತಿಯನ್ನು :** ಬೆಂಗಳೂರು ಉತ್ತರ 2. ಬೆಂಗಳೂರು ದಕ್ಷಿಣ 3. ಚಿಕ್ಕಬಳ್ಳಾಪುರ 4. ಚಿತ್ರದುರ್ಗ 5. ದಾವಣಗೆರೆ 6. ಕೋಲಾರ 7. ಮೈಸೂರು 8. ಚಾಮರಾಜನಗರ 9. ಚಿಕ್ಕೋಡಿ 10. ಬಾಗಲಕೋಟೆ 11. ವಿಜಯಪುರ 12. ಕಲಬುರ್ಗಿ 13. ಬಳ್ಳಾರಿ 14. ಬೀದರ್ 15. ಕೊಪ್ಪಳ 16. ರಾಯಚೂರು ಮತ್ತು 17. ಯಾದಗಿರಿ ಜಿಲ್ಲೆಗಳು ಮತ್ತು ಹೆಚ್ಚುವರಿ ಸಮುದಾಯದ ಸಹಕಾರದೊಂದಿಗೆ ಅನುಷ್ಠಾನಗೊಳಿಸಲಾಗುತ್ತಿರುವ ಧಾರವಾಡ ಹಾಗೂ ಶಿವಮೊಗ್ಗ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ) ಇವರಿಗೆ ಕಳುಹಿಸುತ್ತಾ, ಅಗತ್ಯವಿರುವ ಎಲ್ಲಾ ಜರೂರು ಕ್ರಮಗಳನ್ನು ಕೈಗೊಳ್ಳಲು ತಿಳಿಸಿದೆ.

**(ಮಾನ್ಯ ಆಯುಕ್ತರ ಆದೇಶದಯನ್ವಯ)**

ಸಹನಿರ್ದೇಶಕರು (ಶಾಲಾಶಿಕ್ಷಣ)
ಆಯುಕ್ತರ ಕಛೇರಿ, ಬೆಂಗಳೂರು

Scanned by CamScanner